ಶ್ರೀ ಜಿ.ಡಿ. ನಾಯ್ಕ್ : ಅವರು ಸ್ಥಳೀಯ ಅಭ್ಯರ್ಥಿ ಅಲ್ಲಿ. ತಾವು ಈ ಬಗ್ಗೆ ತನಿಖೆಯನ್ನು ಮಾಡಿ.

ಅಧ್ಯಕ್ಷರು : ಆಯಿತು. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ.ಡಿ. ನಾಯ್ಕ್ : ಈ ಬಗ್ಗೆ ತಾವು ಒಂದು ಉತ್ತರವನ್ನು ಕಳುಹಿಸಿಕೊಡಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರಿಗೆ ಒಂದು ಉತ್ತರದ ಪ್ರತಿಯನ್ನು ಕಳುಹಿಸಿಕೊಡಿ. ಮಾನ್ಯ ಸೈಯದ್ ಯಾಸೀನ್‌ರವರೆ ತಾವು ಗಮನವನ್ನು ಸೆಳೆಯಿರಿ.

19) ವಿಷಯ: ತಾಂತ್ರಿಕ ಕಾಲೇಜನ್ನು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ವಿಟಿಯುಗೆ ವರ್ಗಾಯಿಸಿರುವ ಬಗ್ಗೆ

ಶ್ರೀ ಸೈಯದ್ ಯಾಸೀನ್ : ಮಾನ್ಯ ಅಧ್ಯಕ್ಷರೆ, ರಾಯಚೂರು, ಗಂಗಾವತಿ, ಹೂವಿನ ಹಡಗಲಿ, ಓಗಿನಹಳ್ಳಿ ಮತ್ತು ಕಾರವಾರದ ಸರ್ಕಾರಿ ತಾಂತ್ರಿಕ ಕಾಲೇಜನ್ನು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ವಿಶ್ವೇಶ್ವರಯ್ಯ ತಾಂತ್ರಕ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ) : ಸರ್ಕಾರವು 2007–08 ಮತ್ತು 2008–09ನೇ ಸಾಲಿನಲ್ಲಿ 10 ನೂತನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಬೆಂಗಳೂರು, ರಾಮನಗರ, ಚಾಮರಾಜನಗರ, ಕೆ.ಆರ್.ಪೇಟೆ, ಕುಶಾಲನಗರ, ಹಾಸನ, ಹೂವಿನಹಡಗಲಿ, ಹಾವೇರಿ, ರಾಯಚೂರು ಮತ್ತು ಕಾರವಾರದಲ್ಲಿ ಪ್ರಾರಂಭಿಸಲಾಯಿತು. ಗಂಗಾವತಿಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು 2012–13ನೇ ಸಾಲಿನಿಂದ ಪ್ರಾರಂಭಿಸಲು ತೀರ್ಮಾನಿಸಿದ್ದು ಇದಕ್ಕೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲಾಗಿದೆ. ಗಂಗಾವತಿ, ಹೂವಿನಹಡಗಲಿ, ರಾಯಚೂರು ಮತ್ತು ಕಾರವಾರ ಇವುಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಕಾಲೇಜುಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ ಮತ್ತು ಈ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಿ ಜಮೀನನ್ನು ಸಹ ಈಗಾಗಲೇ ಮಂಜೂರು ಮಾಡಲಾಗಿದೆ. ಕಳೆದ ಮೂರು ವರ್ಷಗಳಿಂದ ರಾಯಚೂರು, ಹೂವಿನಹಡಗಲಿ ಮತ್ತು ಕಾರವಾರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ತಾತ್ಕಾಲಿಕವಾಗಿ

ಇತರೆ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವುಗಳು ಸ್ವಂತ ಕಟ್ಟಡಗಳನ್ನು ಹೊಂದಬೇಕಾಗಿರುತ್ತದೆ.

2. ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯವು 1994 ರಲ್ಲಿಯೇ ಸ್ಥಾಪಿತವಾಗಿರುತ್ತದೆ. ಈ ವಿಶ್ವವಿದ್ಯಾಲಯವು 2011 ರವರೆವಿಗೂ ಯುಜಿಸಿ ಅಧಿನಿಯಮದ ಸೆಕ್ಷನ್ 12 ಬಿರಡಿ ಯುಜಿಸಿ ಅನುಮೋದನೆ ಪಡೆದಿರುವುದಿಲ್ಲ. ಈ ಅನುಮೋದನೆ ಪಡೆಯಬೇಕಾದರೆ ಈ ಕೆಳಕಂಡ ಅವಶ್ಯಕತೆಗಳನ್ನು ಪೂರೈಸಬೇಕಾಗಿರುತ್ತದೆ.

- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಘಟಕ ಕಾಲೇಜುಗಳನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ.
- ಎಐಸಿಟಿಇ/ ಯುಜಿಸಿ ಮಾರ್ಗಸೂಚಿಯಂತೆ ಖಾಯಂ ಬೋಧಕ ಸಿಬ್ಬಂದಿಗಳು ನೇಮಕಾತಿ ಹೊಂದಿರಬೇಕಾಗುತ್ತದೆ.

3. ಹೀಗಾಗಿ 2011ರ ತನಕ ಕೇವಲ ಒಂದು ಅಂದರೆ ದಾವಣಗೆರೆಯ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜನ್ನು ಮಾತ್ರ ಹೊಂದಿದ್ದು, ಈ ಹಿನ್ನೆಲೆಯಲ್ಲಿ ಎಐಸಿಟಿಇ ಮಾರ್ಗಸೂಚಿಯಂತೆ ಖಾಯಂ ಭೋಧಕ ಸಿಬ್ಬಂದಿಗಳನ್ನು ಹೊಂದಿರುವ ಸರ್ಕಾರಿ ಸ್ವಾಮ್ಯದ 04 ಇಂಜಿನಿಯರಿಂಗ್ ಕಾಲೇಜುಗಳನ್ನು ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಮತಿಯೊಂದಿಗೆ ವರ್ಗಾಯಿಸಲು ದಿನಾಂಕ: 15-9-2011ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು.

4. ದಿನಾಂಕ: 03-11-2011ರ ಸರ್ಕಾರಿ ಆದೇಶದಲ್ಲಿ ಈ ಕಾಲೇಜುಗಳನ್ನು ಈ ಕೆಳಕಂಡಂತೆ ಮರುನಾಮೀಕರಿಸಿ ವರ್ಗಾಯಿಸಲಾಗಿದೆ.

(1) ವಿಟಿಯು ಕಾಲೇಜ್ ಆಫ್ ಇಂಜಿನಿಯರಿಂಗ್, ಕಾರವಾರ
(2) ವಿಟಿಯು ಕಾಲೇಜ್ ಆಫ್ ಇಂಜಿನಿಯರಿಂಗ್, ಹೂವಿನಹಡಗಲಿ
(3) ವಿಟಿಯು ಕಾಲೇಜ್ ಆಫ್ ಇಂಜಿನಿಯರಿಂಗ್, ಗಂಗಾವತಿ ಮತ್ತು
(4) ವಿಟಿಯು ಕಾಲೇಜ್ ಆಫ್ ಇಂಜಿನಿಯರಿಂಗ್, ರಾಯಚೂರು

5. ಈ ಮೇಲ್ಕಂಡ 04 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅವಶ್ಯ ಜಮೀನು ಸರ್ಕಾರ ಈಗಾಗಲೇ ಒದಗಿಸಿದೆ. ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿದ ನಂತರ ಸದರಿ ಕಾಲೇಜುಗಳನ್ನು ಅಭಿವೃದ್ಧಿ ಪಡಿಸಲು ಸೂಕ್ತವಾದ ಕಟ್ಟಡ, ವಿದ್ಯಾರ್ಥಿನಿಲಯ, ಇನ್ನಿತರ ಮೂಲ ಸೌಲಭ್ಯಗಳನ್ನು ಒದಗಿಸಲು ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯವು ಕಾರ್ಯೋನ್ಮುಖವಾಗಿರುತ್ತದೆ.

ರಾಯಚೂರು, ಹೂವಿನ ಹಡಗಲಿ, ಕಾರವರ ಮತ್ತು ಗಂಗಾವತಿ ಇಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಿ ಜಮೀನನ್ನು ಮಂಜೂರು ಮಾಡಲಾಗಿದ್ದು ವಿವರಗಳು ಈ ಕೆಳಗಿನಂತೆ ಇದೆ.

ಕ್ರ ಸಂ.	ಕಾಲೇಜಿನ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)	ಸರ್ಕಾರಿ ಜಮೀನು ಮಂಜೂರಾಗಿರುವ ಸ್ಥಳ
1	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು	27.04	ರಾಯಚೂರಿನ ಯರಮರಸ್ ಕ್ಯಾಂಪ್ ಹತ್ತಿರ
2	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ	25.00	ಹೂವಿನಹಡಗಲಿಯಿಂದ 5 ಕಿ.ಮೀ. ದೂರದಲ್ಲಿರುವ ತಿಪ್ಪಾನಹಳ್ಳಿ ಗ್ರಾಮ ಪಂಚಾಯಿತಿಯ ದೇವಗೊಂಡನಹಳ್ಳಿ ಗ್ರಾಮ.
3	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ	25.00	ಮಜಲಿ ಗ್ರಾಮ, ಕಾರವಾರ ಸಮೀಪ.
4	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಗಂಗಾವತಿ	12.00	ಸರ್ವೆ ನಂ.53, ವಿರುಪಾಪುರ ಗ್ರಾಮ, ಗಂಗಾವತಿ ತಾ ಕೊಪ್ಪಳ ಜಿಲ್ಲೆ.

2011-12ನೇ ಸಾಲಿಗೆ ಈ ಮೇಲ್ಕಂಡ ಮೂರು ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ಕಾಲೇಜಿನ ಹೆಸರು	ಒಟ್ಟು ವಿದ್ಯಾರ್ಥಿ ಪ್ರಮಾಣ	ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ
1	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು	240	122
2	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ	240	72
3	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ	240	50

ಶ್ರೀ ಸೈಯದ್ ಯಾಸೀನ್ : ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರು, ಗಂಗಾವತಿ, ಹೂವಿನಹಡಗಲಿ ಮತ್ತು ಕಾರವಾರ Government Engineering College all of a sudden shift ಆಗಿದೆ. They have been handed over to VTU. There are 10 Government engineering Colleges. 50% shift ಮಾಡಿದ್ದೇವೆ. We are worried about infrastructure, salary patten. ಏಕೆಂದರೆ, Rs.17.50 crore sanction ಆಗಿದೆ. I am worried that the fund has gone back. ಆಮೇಲೆ 27 acres Government land sanction ಆಗಿದೆ.

Mr. Speaker : This is only calling attention.

Sri. Syed Yasin : Is it feasible? What is the future of our college? I am worried about the future of the colleges.

ಶ್ರೀ ಎಸ್. ಸುರೇಶ್ ಕುಮಾರ್ : ರಾಯಚೂರಿನ ಇಂಜಿನಿಯರಿಂಗ್ ಕಾಲೇಜು ಏನಿದೆ, ಅದನ್ನು ನಾವು VTU College of Engineering ಎಂದು ಪುನರ್ ನಾಮಕರಣ ಮಾಡಿದ್ದೇವೆ. ಇನ್ನು ಮೂರು ಸರ್ಕಾರಿ ಕಾಲೇಜುಗಳನ್ನು ಸೇರಿಸಿ ಎಲ್ಲದಕ್ಕೂ ಕೂಡ ಇವತ್ತು ಜಮೀನುಗಳು ಇದೆ. Visveswaraiah Technical University ಗೆ ಇದನ್ನು ವರ್ಗಾಯಿಸಿದ

ಮೇಲೆ ನಿಮಗೆ ಪೂರ್ತಿ ಬೇಕಾದ ಮೂಲಭೂತ ಸೌಲಭ್ಯಗಳನ್ನು ನಾವು ಒದಗಿಸಿಕೊಡುತ್ತೇವೆ.

ಅಧ್ಯಕ್ಷರು : ಆಯಿತು.

20) ವಿಷಯ : ಎತ್ತಿನ ಹೊಳೆ ಯೋಜನೆಯನ್ನು ಅರಸೀಕೆರೆಗೂ ಸೇರಿಸುವ ಬಗ್ಗೆ

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ತುಮಕೂರು, ಕೋಲಾರ ವ್ಯಾಪ್ತಿಯ ಪ್ರದೇಶಗಳಿಗೆ ಕುಡಿಯುವ ನೀರಿಗಾಗಿ ಕೈಗೆತ್ತಿಕೊಂಡಿರುವ ಎತ್ತಿನಹೊಳೆ ಯೋಜನೆಯನ್ನು ಅರಸೀಕೆರೆಗೂ ಅಳವಡಿಸುವ ಬಗ್ಗೆ ಸಣ್ಣ ನೀರಾವರಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಪಶ್ಚಿಮಾಭಿಮುಖವಾಗಿ ಹರಿಯುವ ನೇತ್ರಾವತಿ ನದಿಯ ಉಪ–ನದಿಯಾದ ಎತ್ತಿನಹೊಳೆ ಮತ್ತು ಕಾಡುಮನೆ ಹೊಳೆ, ಕೆರಿ ಹೊಳೆ ಮತ್ತು ಹೊಂಗದ ಹಳ್ಳಗಳಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಮಳೆಗಾಲದಲ್ಲಿ ಹರಿಯುವ ನೀರನ್ನು ತಿರುವುಗೊಳಿಸಿ ತೀವ್ರ ನೀರಿನ ಅಭಾವ ಎದುರಿಸುತ್ತಿರುವ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಲು ಎತ್ತಿನಹೊಳೆ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ಶಕ್ಯತಾ ವರದಿಯನ್ನು ತಯಾರಿಸಿಕೊಳ್ಳ ಲಾಗಿದ್ದು, ಅದರಂತೆ ಯೋಜನೆಗೆ 24.01 ಟಿಎಂಸಿ ನೀರು ಲಭ್ಯವಾಗು ವುದಾಗಿ ತಿಳಿದು ಬಂದಿದೆ.

ಈ ಯೋಜನೆಯ ವಿವರವಾದ ಸರ್ವೇ ಕಾರ್ಯ ಕೈಗೆತ್ತಿಕೊಳ್ಳಲು ಈಗ ಟೆಂಡರ್‌ನ್ನು ಕರೆಯಲಾಗಿದ್ದು, ವಿವರವಾದ ಸರ್ವೆ ಮತ್ತು ಸಮೀಕ್ಷೆ ಕಾರ್ಯ ಪೂರ್ಣಗೊಳಿಸಿದ ನಂತರ ಬರಪೀಡಿತ ಜಿಲ್ಲೆಗಳಿಗೆ ನೀರಿನ ಹಂಚಿಕೆಯನ್ನು ನಿರ್ಧರಿಸಬಹುದಾಗಿದೆ. ಅದರಲ್ಲಿ ಹಾಸನ ಜಿಲ್ಲೆಯ ಅರಸೀಕೆರೆಗೆ ನೀರನ್ನು ಒದಗಿಸುವ ಕುರಿತು ನಿರ್ಧರಿಸಬಹುದಾಗಿರುತ್ತದೆ.

ಮಾನ್ಯ ಅಧ್ಯಕ್ಷರೆ, ಇದು ಸಣ್ಣ ನೀರಾವರಿ ಸಚಿವರಿಗೆ ಬಂದಿರುವುದು. ಪಶ್ಚಿಮಾಭಿಮುಖವಾಗಿ ಹರಿಯುವ ನೇತ್ರಾವತಿ ಉಪನದಿ ಯಲ್ಲಿ ಬರುವ ಎತ್ತಿನಹೊಳೆ ಮತ್ತು ಕಾಡುಮನೆ ಇತರೆ ಹಳ್ಳಗಳಿಂದ ನೀರನ್ನು ಬಯಲುಸೀಮೆ ಪ್ರದೇಶಕ್ಕೆ ಹರಿಸುವಂತಹ ಈ ಯೋಜನೆಯಡಿಯಲ್ಲಿ